ಅಲ್ಲಿಂದ ಬಂದವನು ಮರುದಿನ ಮತ್ತೆ... ವೋಟರು ಕಾರ್ಡು ಎತ್ತಿಕೊಂಡು ಉಟ್ಟಬಟ್ಟೆಯಲ್ಲೇ ಮುಖ ತೊಳೆಯದೇ ಆಧಾರ್ ಕೇಂದ್ರಕ್ಕೆ ಹೋಗಿದ್ದ.

ಬೆರಳಚ್ಚನ್ನು ಆತ್ಮಗತ ಮಾಡಿಕೊಳ್ಳುವ ಸ್ಕ್ಯಾನರ್ ಮೇಲೆ ಕೈಬೆರಳುಗಳನ್ನು ಒಂದು ಅಭಯ ಹಸ್ತದಂತೆ ಊರಿದ್ದ ಈ ಬಾರಿ. ತನ್ನೆಲ್ಲಾ ಬೇಸರಗಳನ್ನು ಒಟ್ಟು ಮಾಡಿಕೊಂಡು ಅದಕ್ಕೆ ತುಸು ಕೋಪ ಬೆರೆಸಿ ಬಲವಾಗಿ ಒತ್ತಿದ್ದ. ಅವನು ಜೋರಾಗಿ ಒತ್ತಿದ್ದು ಸರ್ವರ್‌ನ ಎದೆಗೊದೆಯುವಂತಿತ್ತು. ಕಂಪ್ಯೂಟರ್ ಪರದೆ ಮೇಲೆ ಪುಟ್ಟ ಪರಿಧಿಯೊಂದು ಏಳೆಂಟು ಬಾರಿ ಗಿರಕಿ ಹೊಡೆದು ನಿಂತ ಮೇಲೆ ಕೆಂಪು ಮಾರ್ಕೊಂದು ಮೂಡಿತ್ತು.

'ಛೇ...' ಎನ್ನುತ್ತಾ ತಲೆಕೊಡವಿಕೊಂಡ ಆಧಾರ್ ಕಾರ್ಡ್ ನಮೂದು ಮಾಡುವ ಆ ಹುಡುಗ, ಮತ್ತೊಮ್ಮೆ ತನ್ನ ಬಳಿಯಿದ್ದ ಬಟ್ಟೆ ತೆಗೆದುಕೊಂಡು ಪರಸಪ್ಪನ ಬೆರಳು ಒರೆಸಿದ್ದ. ಆ ಹುಡುಗ ಒರೆಸಿದ್ದು ಇವನಿಗೆ ಸಮಾಧಾನವಾಗಿರಲಿಲ್ಲ. ಇದುವರೆಗಿನ ಎಲ್ಲಾ ಕಷ್ಟಗಳು ಅಳಿಸಿ ಹೋಗುವಂತೆ ಹೆಗಲ ಮೇಲಿದ್ದ ಟವೆಲ್‌ಗೆ ಮತ್ತೊಮ್ಮೆ ತನ್ನ ಅಂಗೈ ಗಸಗಸ ತಿಕ್ಕಿಕೊಂಡು ಆ ಸ್ಕ್ಯಾನರ್ ಮೇಲೆ ಬೆರಳು ಅಮುಕಿದ್ದ. ಅದರೊಳಗಿನ ಬೆಳಕು ಅವನು ಬೆರಳು ನುಂಗುವಂತೆ ಓಡಿಬಂದು ಕ್ರಮೇಣ ಮಂದವಾಯಿತು. ಕಂಪ್ಯೂಟರ್ ಮೇಲೆ ಮತ್ತೆ ಬಿಳಿ ಪರದೆಯೊಂದು ಗಿರಕಿಯೊಡೆದು ಚೂರೇ ಚೂರು ಹಸಿರು ಬಣ್ಣ ಮೂಡಿತು. ಆ ಹುಡುಗನಿಗೆ ಇದು ಸಾಕಾಗದು ಅಂತ ತಿಳಿದಿದ್ದರೂ ಇದು ನಾಲ್ಕನೇ ಬಾರಿಯಾದ್ದರಿಂದ 'ಸರಿ ಸರಿ... ಸಾಕು ಫೋಟೊ ತಗೊಬೇಕು.. ಕ್ಯಾಮೆರಾಗೆ ಮುಖ ಮಾಡ್ರಿ' ಎಂದು ಕಂಪ್ಯೂಟರ್‌ಗೆ ಜೋಡಿಸಿದ್ದ ಪುಟ್ಟ ಕ್ಯಾಮೆರಾ ಎತ್ತಿಕೊಂಡನು.

ಬಹುದಿನದಿಂದ ತೆಗೆಸದ ಗಡ್ಡ. ಕೆದರಿದ ಕೂದಲು. ಮುಖದ ಮೇಲೆ ಎಷ್ಟು ತೊಳೆದರೂ ಹೋಗದ ಬಡತನದ ಕುರುಹು... ಕಪ್ಪು ಮೈಬಣ್ಣಕ್ಕೂ ಮಿಗಿಲಾಗಿ ಇವನು ತನ್ನ ಮುಖವನ್ನು ಇನ್ನಷ್ಟು ದೈನ್ಯತೆಗೆ ತಿರುಗಿಸಿಕೊಂಡು ಕ್ಯಾಮೆರಾದತ್ತ ನೋಡಿದ. ಆಧಾರ್ ಕಾರ್ಡ್ ಕೊಡುವವರು ನನ್ನ ಈ ಸೋತ ಮುಖವನ್ನಾದರೂ ನೋಡಿ ಬೇಗ ಒಂದು ಕಾರ್ಡ್ ಕೊಡಲಿ ಎಂಬ ಬಯಕೆಯೊಂದು ಅವನ ಮನದ ಮೂಲೆಯಲ್ಲೆಲ್ಲೊ ಜೀವಂತವಿತ್ತು.

'ಚರ್ರಕ್, ಚರ್ರಕ್...' ಎನ್ನುತ್ತಾ ಮುದ್ರಣವಾಗಿ ಬಂದ ಒಂದು ರಶೀದಿಯನ್ನು ಪರಸಪ್ಪನ ಕೈಗಿತ್ತು ಅವನ ಮುಖ ನೋಡಿದ ಹುಡುಗ. ಪರಸಪ್ಪ ಕಿಸೆಯಿಂದ ಮಡಿಚಿಟ್ಟ ನೂರರ ಒಂದು ನೋಟನ್ನು ತಗ್ದು ಹುಡುಗನ ಕೈಗಿಟ್ಟ. ಮುದುಡಿದ ನೋಟಿನಲ್ಲೂ ಗಾಂಧಿ ನಗುತ್ತಿದ್ದ.

'ಅಣಾ ಇನ್ಮೇಲಾದರೂ ಬರ್ತಾತಾ? ನೀವಾದರೂ ಫೋನ್ ಮಾಡಿ ಹೇಳ್ರಣಾ ಇವ್ನು ಟ್ರ್ಯಾಕ್ಟ್ರಿ ಪರಸ ಅಂತ. ನನ್ ಹೆಸ್ರು ಇಲ್ಲಿ ಎಲ್ರಿಗು ಗೊತ್ತು. ಈ ಕಂಪ್ಯೂಟರ್ರಿಗೆ ಯಾಕ್ ಗೊತ್ತಾಗ್ತಿಲ್ಲ...' ಎಂದು ರಾಗ ಎಳೆದ. ಆಚೆ ಸಾಲು ದೊಡ್ಡದಿದ್ದದ್ದೆ ನೆಪ ಮಾಡಿಕೊಂಡು 'ಆಗುತ್ತೆ ಹೋಗಿ ಹೋಗಿ ಈ ಸರಿ...' ಎನ್ನುತ್ತಾ ಪರಸಪ್ಪನನ್ನು ನಗು ನುಂಗಿಕೊಂಡು ಹೊರಗೆ ಸಾಗ ಹಾಕಿದ್ದ.

ಹೊರಗೆ ಬಂದು ನಿಂತ. ಸಾಲು ತುಸು ದೊಡ್ಡದೇ. ಎಲ್ರೂ ಕೈಯಲ್ಲಿ ಆಧಾರ್ ಕಾರ್ಡುಗಳು. ಹೆಸರೋ, ವಯಸ್ಸೋ, ವಿಳಾಸನೋ ಬದಲಿಸಲೊ ನಿಂತವರು. ಅವರನ್ನೆಲ್ಲಾ ನೋಡಿ ಎದೆಯೊಳಗಿದ್ದ ಯಾವುದೋ ದುಃಖವೊಂದು ಚಿಮ್ಮಿ ಬಂತು. ಇಡೀ ಜಗತ್ತು ಆ ಒಂದು ಕಾರ್ಡ್ ನೆವವಾಗಿಟ್ಟು ನನ್ನನ್ನು ಹೊರಹಾಕಿದೆ ಅನಿಸತೊಡಗಿತ್ತು. ಬದುಕಲಿಕ್ಕೆ ಇವರಿಗೆಲ್ಲಾ ಆ ಕಾರ್ಡಿನ ಮೂಲಕ ಒಂದು ಪರವಾನಗಿ ಸಿಕ್ಕಿದೆ. ನನಗೇನಿದೆ ಇಲ್ಲಿ? ಈ ಕಾರ್ಡು ಇಲ್ಲದೆ ನನಗೆ ಸಾಯಲಿಕ್ಕಾದರೂ ಅವಕಾಶ ಇದೆಯೋ ಇಲ್ಲವೋ... ಎಂದು ಯೋಚಿಸತೊಡಗಿದ್ದ.

ಆ ಬಾರಿಯೂ ಅವನಿಗೆ ಕಾರ್ಡು ಬಂದಿರಲಿಲ್ಲ.

ಮತ್ತೆ ಜಿಲ್ಲಾ ಕೇಂದ್ರಕ್ಕೆ ಹೋಗಿ ಅಲವತ್ತುಕೊಂಡಿದ್ದ. ಅವರು ಅಲ್ಲಿಂದ ಆಧಾರ್ ಕಾರ್ಡು ಮಾಡುವ ಹುಡುಗನಿಗೆ ಕರೆ ಮಾಡಿ ಅದೇನೇನೊ ಮಾತಾಡಿದ್ದರು. ನಂತರ ಇದೊಂದು ಸರಿ ಅಲ್ಲೇ ತಗ್ಸಿ... ಬರಲಿಲ್ಲ ಅಂದರೆ ಮತ್ತೆ ಇಲ್ಲಿಗೆ ಬನ್ನಿ ಎಂದು ಹೇಳಿ ಕಳುಹಿಸಿದ್ದರು.

* * *

ಪರಸಪ್ಪ ದಾರಿಯ ಮಧ್ಯೆ ಹಲವು ಬಾರಿ ತನ್ನ ಬೆರಳುಗಳನ್ನು ನೋಡಿಕೊಳ್ಳುತ್ತಾ ನಡೆಯುವುದನ್ನು ಜನ ಆಡಿಕೊಳ್ಳತೊಡಗಿದ್ದರು. ಕೈಯೊಳಗಿನ ಗೆರೆಗಳು ಮಬ್ಬಾಗಿರಬಹುದು ಆದರೆ ಈ ಊರಿನೊಂದಿಗಿನ ನನ್ನ ಸಂಬಂಧವಲ್ಲ. ತಾನು ಬದುಕುತ್ತಿರುವುದೇ